**1 ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಮ್.ಎಫ್.ಸಿ ನ್ಯಾಯಾಲಯ., ಮೂಡಿಗೆರೆ.**

ಸಿ.ಸಿ ನಂಬರ್ಃ **490/2023**

| | | |
|---|---|---|
| ಪಿರ್ಯಾದಿ | : | ರಾಜ್ಯ, ಪರವಾಗಿ ಕಳಸ ಪೊಲೀಸ್ ಠಾಣೆ,<br>ಕಳಸ ತಾಲ್ಲೂಕು. |

ವಿರುದ್ಧ

| | | |
|---|---|---|
| ಆರೋಪಿ | : | ಜೋಯಿ ಬಿನ್ ಲೂಕಸ್,<br>ವಯಸ್ಸು ಸುಮಾರು 52 ವರ್ಷ,<br>ವಾಸಃ ಮಹೇಂದ್ರ ಗೌಡರವರ ಕೂಲಿ<br>ಲೈನ್ ಮನೆ, ಮರಸಣಿಗೆ ಗ್ರಾಮ,<br>ಕಳಸ ಹೋಬಳಿ ಮತ್ತು ತಾಲ್ಲೂಕು. |

* * * * *

ದಂಡ ಪ್ರಕ್ರಿಯಾ ಸಂಹಿತೆ **313** ರ ಅಡಿಯಲ್ಲಿ ಮಾಡಿಕೊಳ್ಳಲಾದ ಆರೋಪಿತರ ಹೇಳಿಕೆ

ಪ್ರಶ್ನೆ 1) ಅಭಿಯೋಜನೆಯ ಪರ ಹಾಜರಾದ ಸಾಕ್ಷಿದಾರರ ಹೇಳಿಕೆಗಳನ್ನು ಕೇಳಿದ್ದೀರಾ?

ಆರೋಪಿಯ ಉತ್ತರಃ

ಪ್ರಶ್ನೆಃ 2) ಫ್ರಾಸಾ-1 ರತ್ನ ರವರು ತಮ್ಮ ಸಾಕ್ಷ್ಯದಲ್ಲಿ 2 ವರ್ಷದ ಹಿಂದೆ ಅವರು ಚಾಸಾ-2 ರವರಿಗೆ ನೀರು ತರಲು ಹೇಳಿದ್ದು, ಆಗ ಅವರು ಆರೋಪಿಯಾದ ನೀವು ವಾಸವಿದ್ದ ಲೈನ್ ಬಳಿ ನೀರು ತರಲು ಹೋಗಿದ್ದರು ಎಂದು ಸಾಕ್ಷ್ಯ ನುಡಿದಿರುತ್ತಾರೆ ಇದಕ್ಕೆ ನಿಮ್ಮ ಉತ್ತರ ಏನು?

ಆರೋಪಿಯ ಉತ್ತರಃ

ಪ್ರಶ್ನೆಃ 3) ಫ್ರಾಸಾ-1 ರವರು ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ ನಂತರ ಆರೋಪಿಯಾದ ನೀವು ಚಾಸಾ-2 ರವರೊಂದಿಗೆ ಜಗಳವಾಡಿ, ಕತ್ತಿಯಿಂದ ಅವರ ತಲೆಗೆ ಹಿಂದೆಯಿಂದ ಹೊಡೆದು, ಚಾಸಾ-2 ರವರ ಮೂಗು, ಬಾಯಿ ಮತ್ತು ತಲೆಗೆ ಗಾಯ ಮಾಡಿದ ನಂತರ ಆರೋಪಿಯಾದ ನೀವು ಓಡಿಹೋಗಿರುತ್ತೀರಿ ಎಂದು ಸಾಕ್ಷ್ಯ ನುಡಿದಿರುತ್ತಾರೆ ಇದಕ್ಕೆ ನಿಮ್ಮ ಉತ್ತರ ಏನು?

ಆರೋಪಿಯ ಉತ್ತರಃ

ಪ್ರಶ್ನೆಃ 4) ಫ್ರಾಸಾ-1 ರವರು ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ ನಂತರ ಅವರು ಚಾಸಾ-2 ರವರ ಬಳಿ ಹೋದಾಗ ಚಾಸಾ-7 ರವರು ಅಲ್ಲಿಗೆ ಬಂದು ರಕ್ತ ನಿಲ್ಲಿಸಲು ಟವೆಲ್ ಕೊಟ್ಟಿದ್ದು, ನಂತರ ಚಾಸಾ-8 ರವರು ಅಲ್ಲಿಗೆ ಬಂದು ಅವರನ್ನು ಮತ್ತು ಚಾಸಾ-2 ರವರನ್ನು ಕಳಸಾದ ಸರ್ಕಾರಿ ಆಸ್ಪತ್ರೆಗೆ ಆಟೋದಲ್ಲಿ ಕಳುಹಿಸಿದರು ಎಂದು ಸಾಕ್ಷ್ಯ ನುಡಿದಿರುತ್ತಾರೆ ಇದಕ್ಕೆ ನಿಮ್ಮ ಉತ್ತರ ಏನು?

ಆರೋಪಿಯ ಉತ್ತರಃ

ಪ್ರಶ್ನೆಃ 5) ಫ್ರಾಸಾ-1 ರವರು ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ ನಂತರ ಅವರು ಕಳಸಾ ಪೋಲಿಸರಿಗೆ ದೂರು ನೀಡಿದ ನಂತರ ಆ್ಯಂಬುಲೆನ್ಸ್ ನಿಂದ ಚಿಕ್ಕಮಗಳೂರು ಸರ್ಕಾರಿ ಆಸ್ಪತ್ರೆಗೆ ಹೋಗಿ ಚಾಸಾ-2 ರವರಿಗೆ 11 ದಿನ ಚಿಕಿತ್ಸೆ ಕೊಡಿಸಿದ್ದು ಆ ಸಮಯದಲ್ಲಿ ಚಾಸಾ-2 ರವರ ಹಲ್ಲುಗಳನ್ನು ತೆಗೆದು ಹಾಕಿದ್ದಾರೆ ಎಂದು ಸಾಕ್ಷ್ಯ ನುಡಿದಿರುತ್ತಾರೆ ಇದಕ್ಕೆ ನಿಮ್ಮ ಉತ್ತರ ಏನು?

ಆರೋಪಿಯ ಉತ್ತರಃ

ಪ್ರಶ್ನೆಃ 6) ಫ್ರಾಸಾ-1 ರವರು ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ ಆಸ್ಪತ್ರೆಯಿಂದ ಬಂದ ನಂತರ ಪೋಲೀಸರು ಬಂದು ಕೃತ್ಯ ನಡೆದ ಸ್ಥಳವನ್ನು ತೋರಿಸುವಂತೆ ಕೇಳಿದ್ದು, ಅದರಂತೆ ತೋರಿಸಿದ್ದು, ಆಸ್ಪತ್ರೆಯಲ್ಲಿರುವಾಗ ಪೋಲಿಸರು ಚಾಸಾ-2 ರವರ ಬಟ್ಟೆ ಮತ್ತು ರಕ್ತದ ಮಾದರಿಯನ್ನು ಪಡೆದುಕೊಂಡು ಹೋಗಿದ್ದಾರೆ ಎಂದು ಸಾಕ್ಷ್ಯ ನುಡಿದಿರುತ್ತಾರೆ ಇದಕ್ಕೆ ನಿಮ್ಮ ಉತ್ತರ ಏನು?

ಆರೋಪಿಯ ಉತ್ತರಃ

ಪ್ರಶ್ನೆಃ 7) ಫ್ರಾಸಾ-2 ತಾಮಸ್ ರವರು ತಮ್ಮ ಸಾಕ್ಷ್ಯದಲ್ಲಿ 1 ವರ್ಷದ ಹಿಂದೆ ಕುಡಿಯಲು ನೀರು ತರಲು ಅವರ ಲೈನ್ ನ ಕೆಳಗೆ ಇರುವ ಮತ್ತೊಂದು ಲೈನ್ ಬಳಿ ಹೋಗಿದ್ದು, ಅಲ್ಲಿ ಆರೋಪಿಯಾದ ನೀವು ಸ್ನಾನದ ನೀರಿಗಾಗಿ ಬಕೇಟ್ ಇಟ್ಟಿರುತ್ತೀರಿ ಎಂದು ಸಾಕ್ಷ್ಯ ನುಡಿದಿರುತ್ತಾರೆ ಇದಕ್ಕೆ ನಿಮ್ಮ ಉತ್ತರ ಏನು?

ಆರೋಪಿಯ ಉತ್ತರಃ

ಪ್ರಶ್ನೆಃ 8) ಫ್ರಾಸಾ-2 ರವರು ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ ನಂತರ ಆರೋಪಿಯಾದ

ನೀವು ಅವರಿಗೆ ಬೋಳಿಮಗ, ಸೂಳೆಮಗ ಎಂದು ಬೈದು ಕತ್ತಿಯಿಂದ ಮೊದಲು ಅವರ ತಲೆಗೆ ಹೊಡೆದಾಗ ಅವರು ಪ್ರಜ್ಞೆ ತಪ್ಪಿ ಬಿದ್ದಾಗ, ಅವರ ಮೂಗು ಬಾಯಿಗೆ ಕತ್ತಿಯಿಂದ ಹೊಡೆದಿದ್ದಾರೆ ಎಂದು ಸಾಕ್ಷ್ಯ ನುಡಿದಿರುತ್ತಾರೆ ಇದಕ್ಕೆ ನಿಮ್ಮ ಉತ್ತರ ಏನು?

ಆರೋಪಿಯ ಉತ್ತರಃ

ಪ್ರಶ್ನೆ: 9) ಪ್ರಾಸಾ-2 ರವರು ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ ನಂತರ ಅವರಿಗೆ ಪ್ರಜ್ಞೆ ಬಂದಾಗ ಅವರು ಕಳಸ ಆಸ್ಪತ್ರೆಯಲ್ಲಿ ಇದ್ದು, ನಂತರ ಅಲ್ಲಿಂದ ಚಿಕ್ಕಮಗಳೂರು ಆಸ್ಪತ್ರೆಗೆ ಕಳುಹಿಸಿದ್ದು, ಅಲ್ಲಿ ಅವರು 11 ದಿನಗಳ ಕಾಲ ಚಿಕಿತ್ಸೆ ಪಡೆದಿರುತ್ತೇನೆ ಎಂದು ಸಾಕ್ಷ್ಯ ನುಡಿದಿರುತ್ತಾರೆ ಇದಕ್ಕೆ ನಿಮ್ಮ ಉತ್ತರ ಏನು?

ಆರೋಪಿಯ ಉತ್ತರಃ

ಪ್ರಶ್ನೆ: 10) ಪ್ರಾಸಾ-2 ರವರು ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ ಅವರು ಆಸ್ಪತ್ರೆಯಲ್ಲಿ ಇದ್ದಾಗ ಪೋಲಿಸರು ಬಂದು ಅವರ ಬಟ್ಟೆಗಳು, ರಕ್ತದ ಮಾದರಿ ತೆಗೆದುಕೊಂಡು, ಫೋಟೋ ತೆಗೆದಿರುತ್ತಾರೆ ಎಂದು ಸಾಕ್ಷ್ಯ ನುಡಿದಿರುತ್ತಾರೆ ಇದಕ್ಕೆ ನಿಮ್ಮ ಉತ್ತರ ಏನು?

ಆರೋಪಿಯ ಉತ್ತರಃ

ಪ್ರಶ್ನೆ: 11) ಪ್ರಾಸಾ-6 ಡಾ.ಚೇತನ್ ರವರು ತಮ್ಮ ಸಾಕ್ಷ್ಯದಲ್ಲಿ ದಿ.29.11.2022 ರಂದು ಕಳಸ ಪೋಲಿಸರು ಕಳುಹಿಸಿಕೊಟ್ಟ ಎರಡು ಪತ್ರಗಳನ್ನು ಸ್ವೀಕರಿಸಿಕೊಂಡು ಅದರಂತೆ ಚಿಕ್ಕಮಗಳೂರು ಜಿಲ್ಲಾ ಆಸ್ಪತ್ರೆಯಲ್ಲಿ ದಾಖಲಾಗಿದ್ದ ಚಾಸಾ-2 ರವರ ಟೀ ಶರ್ಟ್ ಮತ್ತು ಬರ್ಮೋಡವನ್ನು ಸಂಗ್ರಹಿಸಿ, RFSL ರವರಿಗೆ ಪತ್ರವನ್ನು ಬರೆದು ಪೋಲಿಸರಿಗೆ ಕೊಟ್ಟು, ಚಾಸಾ-2 ರವರ ರಕ್ತದ ಮಾದರಿಯನ್ನು ಪರೀಕ್ಷಿಸಿ ವರದಿ ನೀಡಿರುತ್ತೇನೆ ಎಂದು ಸಾಕ್ಷ್ಯ ನುಡಿದಿರುತ್ತಾರೆ ಇದಕ್ಕೆ ನಿಮ್ಮ ಉತ್ತರ ಏನು?

ಆರೋಪಿಯ ಉತ್ತರಃ

ಪ್ರಶ್ನೆ: 12) ಪ್ರಾಸಾ-8 ಡಾ.ಸುಂದರೇಶ್ ರವರು ತಮ್ಮ ಸಾಕ್ಷ್ಯದಲ್ಲಿ ದಿಃ 27.11.2022 ರಂದು ಸಂಜೆ ಡಾ.ಮಂಜುನಾಥ್ ಎಂಬುವ ವೈದ್ಯಾಧಿಕಾರಿ ಚಾಸಾ-2 ರವರನ್ನು ಹಲ್ಲೆಯ ಹಿನ್ನೆಲೆಯಲ್ಲಿ ಪರೀಕ್ಷಿಸಿರುವ ಬಗ್ಗೆ ಎಂ.ಎಲ್.ಸಿ. ರಿಜಿಸ್ಟರ್ ನಲ್ಲಿ ನಮೂದಿಸಿರುತ್ತಾರೆ ಎಂದು ಸಾಕ್ಷ್ಯ ನುಡಿದಿರುತ್ತಾರೆ ಇದಕ್ಕೆ ನಿಮ್ಮ ಉತ್ತರ ಏನು?

ಆರೋಪಿಯ ಉತ್ತರಃ

ಪ್ರಶ್ನೆಃ 13) ಫ್ರಾಸಾ-8 ರವರು ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ ನಂತರ ಸದರಿ ವರದಿಯನ್ನು ಕೂಲಂಕುಶವಾಗಿ ಪರಿಶೀಲಿಸಿದಾಗ ಚಾಸಾ-2 ರವರಿಗೆ ದಂತ ಜೋಡಣೆಯ ಮೂಳೆಯು ಮುರಿದಿರುವುದು ಕಂಡುಬಂದಿದೆ ಮತ್ತು ದಂತದ ಮೂಳೆಗೂ ಮತ್ತು ಮೆದುಳಿನ ಮೂಳೆಗೂ ಸಂಪರ್ಕವಿರುವಂತಹ ಮೂಳೆಯೂ ಕೂಡ ಮುರಿದಿದ್ದು ಸದರಿ ಗಾಯಗಳು ತೀರ್ವ ಸ್ವರೂಪದಾಗಿರುತ್ತದೆ ಎಂದು ಸಾಕ್ಷ್ಯ ನುಡಿದಿರುತ್ತಾರೆ ಇದಕ್ಕೆ ನಿಮ್ಮ ಉತ್ತರ ಏನು?

ಆರೋಪಿಯ ಉತ್ತರಃ

ಪ್ರಶ್ನೆಃ 14) ಫ್ರಾಸಾ-9 ಎಂ.ಸಿ. ಮಹೇಂದ್ರ ರವರು ತಮ್ಮ ಸಾಕ್ಷ್ಯದಲ್ಲಿ ಕಳೆದ 4 ವರ್ಷಗಳ ಹಿಂದೆ ಚಾಸಾ-7 ರವರು, ಚಾಸಾ-2 ರವರಿಗೆ ಆರೋಪಿಯಾದ ನೀವು ಹೊಡೆದಿರುತ್ತೀರೆಂದು ತಿಳಿಸಿದ್ದು, ಘಟನಾ ಸ್ಥಳಕ್ಕೆ ಹೋಗಿ ನೋಡಲಾಗಿ ಚಾಸಾ-2 ರವರ ಮುಖದಿಂದ ರಕ್ತಸ್ರಾವವಾಗುತ್ತಿರುವುದು ಕಂಡುಬಂದಿದ್ದು, ಚಾಸಾ-2 ರವರನ್ನು ಆಸ್ಪತ್ರೆಗೆ ಕಳುಹಿಸಿದ್ದು, ನಂತರ ಪೋಲಿಸರು ಬಂದು ಸ್ಥಳ ಮಹಜರ್ ಕ್ರಮವನ್ನು ಜರುಗಿಸಿರುತ್ತಾರೆ ಎಂದು ಸಾಕ್ಷ್ಯ ನುಡಿದಿರುತ್ತಾರೆ ಇದಕ್ಕೆ ನಿಮ್ಮ ಉತ್ತರ ಏನು?

ಆರೋಪಿಯ ಉತ್ತರಃ

ಪ್ರಶ್ನೆಃ 15) ಫ್ರಾಸಾ-10 ಹರ್ಷವರ್ದನ್ ಹೆಚ್.ಕೆ. ರವರು ತಮ್ಮ ಸಾಕ್ಷ್ಯದಲ್ಲಿ ದಿಃ 27.11.2022 ರಂದು ಪ್ರಕರಣದ ಕಡತವನ್ನು ಚಾಸಾ-14 ರವರಿಂದ ಪಡೆದುಕೊಂಡು, ಪ್ರಕರಣದ ಆರೋಪಿಯಾದ ನಿಮ್ಮನ್ನು ದಸ್ತಗಿರಿ ಮಾಡಲು ಮರಸಣಿಗೆ ಗ್ರಾಮದ ಚಾಸಾ-8 ರವರ ತೋಟಕ್ಕೆ ಹೋಗಿದ್ದು, ನಂತರ ಆರೋಪಿಯಾದ ನೀವು ಕಳಸದ ಕಡೆಗೆ ಹೋಗಿರುವ ಕುರಿತು ಮಾಹಿತಿ ಪಡೆದು, ಆರೋಪಿಯಾದ ನಿಮ್ಮನ್ನು ಬಾಳೆಕಾನ್ ಬಳಿಯಲ್ಲಿ ವಶಕ್ಕೆ ಪಡೆದು ಠಾಣೆಗೆ ಕರೆದುಕೊಂಡು ಹೋಗಿರುತ್ತೇವೆ ಎಂದು ಸಾಕ್ಷ್ಯ ನುಡಿದಿರುತ್ತಾರೆ ಇದಕ್ಕೆ ನಿಮ್ಮ ಉತ್ತರ ಏನು?

ಆರೋಪಿಯ ಉತ್ತರಃ

ಪ್ರಶ್ನೆಃ 16) ಫ್ರಾಸಾ-10 ರವರು ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ ನಂತರ ಆರೋಪಿಯಾದ ನಿಮ್ಮನ್ನು ಪ್ರಾಥಮಿಕ ಪರೀಕ್ಷೆಗೆ ಒಳಪಡಿಸಿ, ನ್ಯಾಯಾಲಯದ ಆದೇಶದಂತೆ ದಸ್ತಗಿರಿ

ಕ್ರಮವನ್ನು ಜರುಗಿಸಿ, ಆರೋಪಿಯಾದ ನಿಮ್ಮ ಬಟ್ಟೆಯನ್ನು ತನಿಖೆಯ ಸಂಬಂದ ವಶಪಡಿಸಿಕೊಂಡು, ಚಾಸಾ-5 ಮತ್ತು 6 ರವರನ್ನು ಠಾಣೆಗೆ ಬರಮಾಡಿಕೊಂಡು ಮಹಜರ್ ಕ್ರಮ ಜರುಗಿಸಲಾಯಿತು ಎಂದು ಸಾಕ್ಷ್ಯ ನುಡಿದಿರುತ್ತಾರೆ ಇದಕ್ಕೆ ನಿಮ್ಮ ಉತ್ತರ ಏನು?

ಆರೋಪಿಯ ಉತ್ತರಃ

ಪ್ರಶ್ನೆಃ 17) ಫ್ರಾಸಾ-10 ರವರು ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ ನಂತರ ವಶಪಡಿಸಿಕೊಂಡ ಬಟ್ಟೆಯನ್ನು ಠಾಣಾ ಪಿ.ಎಫ್.ನಂ.90/2022 ರಡಿಯಲ್ಲಿ ನಮೂದಿಸಿ, ಮುಂದಿನ ಕ್ರಮಕ್ಕಾಗಿ ನ್ಯಾಯಾಲಯದ ಮುಂದೆ ಮಾಡಿಕೊಂಡು, ಮಹಜರ್ ಕಾಲಕ್ಕೆ ತೆಗೆದ ಫೋಟೊ ಸಂಬಂದ 65 ಬಿ ಪ್ರಮಾಣಪತ್ರ ಪಡೆದು, ನಂತರ ಆರೋಪಿಯಾದ ನಿಮ್ಮ ಸ್ವ ಇಚ್ಛಾ ಹೇಳಿಕೆಯನ್ನು ಪಡೆದುಕೊಳ್ಳಲಾಯಿತು ಎಂದು ಸಾಕ್ಷ್ಯ ನುಡಿದಿರುತ್ತಾರೆ ಇದಕ್ಕೆ ನಿಮ್ಮ ಉತ್ತರ ಏನು?

ಆರೋಪಿಯ ಉತ್ತರಃ

ಪ್ರಶ್ನೆಃ 18) ಫ್ರಾಸಾ-10 ರವರು ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ ದಿ.28.11.2022 ರಂದು ಆರೋಪಿಯಾದ ನಿಮ್ಮನ್ನು ಕೃತ್ಯ ನಡೆದ ಸ್ಥಳಕ್ಕೆ ಕರೆದುಕೊಂಡು ಹೋಗಿದ್ದು, ಹಲ್ಲೆಗೆ ಬಳಸಿದ್ದ ಕತ್ತಿಯನ್ನು ಚಾಸಾ-3 ಮತ್ತು 4 ರವರ ಸಮಕ್ಷಮ ವಶಕ್ಕೆ ಪಡೆದು, ಮಹಜರ್ ಕ್ರಮ ಜರುಗಿಸಿ, ಫೋಟೊ ತೆಗೆದು ನಕಾಶೆ ಬರೆದು, ಮುದ್ದೆಮಾಲುಗಳನ್ನು ಠಾಣಾ ಪಿ.ಎಫ್.ನಂ99/2022 ರಡಿಯಲ್ಲಿ ನಮೂದಿಸಿ, ಮುಂದಿನ ಕ್ರಮಕ್ಕಾಗಿ ನ್ಯಾಯಾಲಯದ ಮುಂದೆ ನಿವೇದನೆ ಮಾಡಿಕೊಂಡಿರುತ್ತೇನೆ ಎಂದು ಸಾಕ್ಷ್ಯ ನುಡಿದಿರುತ್ತಾರೆ ಇದಕ್ಕೆ ನಿಮ್ಮ ಉತ್ತರ ಏನು?

ಆರೋಪಿಯ ಉತ್ತರಃ

ಪ್ರಶ್ನೆಃ 19) ಫ್ರಾಸಾ-11 ಮೋಹನ್ ಕುಮಾರ್ ಸಿ.ಆರ್. ರವರು ತಮ್ಮ ಸಾಕ್ಷ್ಯದಲ್ಲಿ ದಿಃ 27.11.2022 ರಂದು ಕರ್ತವ್ಯದಲ್ಲಿದ್ದಾಗ, ಕಳಸ ಸಮುದಾಯ ಆರೋಗ್ಯ ಕೇಂದ್ರದಿಂದ ಮಾಹಿತಿ ಬಂದಿದ್ದು, ನಂತರ ಚಾಸಾ-1 ರವರ ಠಾಣೆಗೆ ಬಂದು ನೀಡಿದ ದೂರನ್ನು ಸ್ವೀಕರಿಸಿಕೊಂಡು, ಪ್ರಥಮ ವರ್ತಮಾನ ವರದಿ ತಯಾರಿಸಿ, ನಂತರ ರೇವುಗೊಂಡ ಬಿರಾದರ ಎಂಬ ಸಿಬ್ಬಂದಿಯ ಮುಖಾಂತರ ಪ್ರಥಮ ವರ್ತಮಾನ ವರದಿಯನ್ನು ನ್ಯಾಯಾಲಯಕ್ಕೆ ಕಳುಹಿಸಿಕೊಟ್ಟು, ಮುಂದಿನ ತನಿಖೆಗಾಗಿ ಕಡತವನ್ನು ಚಾಸಾ-15 ರವರಿಗೆ

ಹಸ್ತಾಂತರಿಸಿರುತ್ತೇನೆ ಎಂದು ಸಾಕ್ಷ್ಯ ನುಡಿದಿರುತ್ತಾರೆ ಇದಕ್ಕೆ ನಿಮ್ಮ ಉತ್ತರ ಏನು?

ಆರೋಪಿಯ ಉತ್ತರಃ

ಪ್ರಶ್ನೆಃ 20) ನೀವು ನ್ಯಾಯಾಲಯಕ್ಕೆ ಹೆಚ್ಚಿಗೆ ಏನಾದರೂ ಹೇಳಲು ಇದೆಯೇ?

ಆರೋಪಿಯ ಉತ್ತರಃ

ಪ್ರಶ್ನೆಃ 21) ನಿಮ್ಮ ಪರ ಸಾಕ್ಷ್ಯ ವಿಚಾರಣೆ ಇದೆಯೇ ?

ಆರೋಪಿಯ ಉತ್ತರಃ

(ಮೇಲಿನ ಸಾಕ್ಷಿದಾರರ ಎಲ್ಲಾ ಹೇಳಿಕೆಗಳನ್ನು ಶೀಘ್ರಲಿಪಿಗಾರರಿಗೆ ಗಣಕ ಯಂತ್ರದಲ್ಲಿ ಬೆರಳಚ್ಚು ಮಾಡಿಸಿ, ಆರೋಪಿತರಿಗೆ ಓದಿ ಹೇಳಿ ಅವರು ಕೊಟ್ಟ ಉತ್ತರವನ್ನು ಯಥಾವತ್ತಾಗಿ ಬರೆದುಕೊಂಡಿರುತ್ತೇನೆಂದು ದೃಢಪಡಿಸಿಕೊಳ್ಳಲಾಗಿದೆ)

Sd/-

ಮೂಡಿಗೆರೆ
ದಿನಾಂಕಃ 09.01.2026.

1 ನೇ ಹೆಚ್ಚುವರಿ ಸಿವಿಲ್ ಜಡ್ಜ್ ಮತ್ತು ಜೆಎಮ್‌ಎಫ್‌ಸಿ
ನ್ಯಾಯಾಲಯ, ಮೂಡಿಗೆರೆ,